OS No. 19/2015

DW-1

**(ಇಂದು ದಿಃ 11-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ.SKD ವಕೀಲರಿಂದಃ-</u>**

ನನ್ನ ತಾಯಿ ಹೆಸರು ಸರಸ್ವತಿ. ಶಾಮಮ್ಮ ದೂರಿನಿಂದ ನನಗೆ ಅಕ್ಕ ಆಗಬೇಕು. ಸಾಯಮ್ಮ ನನ್ನ ಸಂಬಂಧಿಕರು ಅಲ್ಲ, ದಾವಾ ಸ್ವತ್ತು ಸಾಯಮ್ಮನ ಹೆಸರಿಗೆ ಮಂಜೂರು ಆಗಿದೆ, ಎಂದರೆ ಶಾಮಮ್ಮ ನ ಹೆಸರಿಗೆ ಆಗಿದೆ ಎಂದು ಹೇಳುತ್ತಾರೆ. ಸರ್ವೇ ನಂ . 85 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ, ಸರ್ವೇ ನಂ 185 ರ ಜಮೀನು ನಿಪಿ-43 ರ ಪ್ರಕಾರ ಅದರಲ್ಲಿ ನಮೂದಿಸಿರುವ ವ್ಯಕ್ತಿಗಳಿಗೆ ಮಂಜೂರು ಆಗಿದೆ ಎಂದರೆ ಸರಿ. ನನ್ನ ತಂದೆ ಹೆಸರು ರಾಮಪ್ಪ ತಂದೆ ಸಾಯಪ್ಪರವರೆಗೆ ಜಮೀನು ಮಂಜೂರಾಗಿದೆ. ನಿಪಿ-43 ರಲ್ಲಿ ನನ್ನ ತಂದೆಗೆ ಅಥವಾ ನನ್ನ ಮುತ್ಯ ರವರಿಗೆ ಮಂಜೂರಾಗಿಲ್ಲ ಎಂದರೆ ಸರಿಯಲ್ಲ, ನಿಪಿ-43 ರಂತೆ ಮಂಜೂರು ಆದಂತೆ ಅವರವರ ಹೆಸರಿಗೆ ಮುಟೇಷನ್ ಆಗಿದೆ ಎಂದರೆ ಸರಿ. ನಿಪಿ-43 ರಲ್ಲಿ ಮಂಜೂರಾಗಿರುವ ವ್ಯಕ್ತಿಗಳು ಮಂಜೂರಾದ ಜಮೀನುಗಳಿಗೆ ಮಾಲೀಕರು ಎಂದರೆ ಸರಿ. ಸಾಯಮ್ಮ ಗಂಡ ಹುಸೇನಪ್ಪ ಬಕ್ಕಿ ಶಾಮಮ್ಮನ ತಾಯಿ ಎಂದರೆ ಸರಿ. ಸಾಯಮ್ಮ ಸರ್ವೇ ನಂ 185 ರಲ್ಲಿ ಮತ್ತು ಉಳಿದ ಜಮೀನುಗಳನ್ನು ನಿಪಿ-45 ರ ಪ್ರಕಾರ ಮರಣ ಶಾಸನ ಪತ್ರದ ಪ್ರಕಾರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಸದರಿ ಮರಣ ಶಾಸನ ಪತ್ರ ಕಲಬುರಗಿಯ ನ್ಯಾಯಾಲಯದಲ್ಲಿ ಅಸಲು ದಾವಾ ನಂ.3/1985 ರಲ್ಲಿ ಸಾಬೀತಾಗಿದೆ ಎಂದರೆ ನನಗೆ ಗೊತ್ತಿಲ್ಲ, ಸದರಿ ದಾವೆಯಲ್ಲಿ ಮರಣ ಶಾಸನ ಪತ್ರವನ್ನು ವಜಾ ಮಾಡಲು ಬರುವುದಿಲ್ಲ ಎಂದು ಪೆಬ್ರವರಿ 1987 ರಲ್ಲಿ ತೀರ್ಪು ಆಗಿದೆ ಎಂದರೆ ನನಗೆ ಗೊತ್ತಿಲ್ಲ, ಆ ಕೇಸಿನ ಪ್ರತಿವಾದಿಯರು ಸದರಿ ಡಿಕ್ರಿ ಪ್ರಕಾರ ನಡೆದುಕೊಳ್ಳಲಿಲ್ಲಾ ಎಂದರೆ ನನಗೆ ಗೊತ್ತಿಲ್ಲ, ಸರ್ವೇ ನಂ 363 ಸದರಿ ದಾವೆಯಲ್ಲಿ ಇರಲಿಲ್ಲಾ ಎಂದರೆ ನನಗೆ ಗೊತ್ತಿಲ್ಲ, ಸರ್ವೇ ನಂ 363 ಶಾಮಮ್ಮನಿಗೆ ಸಂಬಂಧಪಟ್ಟ ಆಸ್ತಿ ಎಂದರೆ ಸರಿಯಲ್ಲ, ಶಾಮಮ್ಮ 27,000/- ಗಳಿಗೆ ದಾವಾ ಸ್ವತ್ತುಗಳನ್ನು ನನ್ನ ತಂದೆಯ ಹೆಸರಿಗೆ ಖರೀದಿ ಕೊಟ್ಟಿದ್ದಾರೆ. ಖರೀದಿ ಪ್ರಕಾರ ಪಹಣಿ ಆಗಿಲ್ಲ ಎಂದರೆ ಸರಿ. ಖರೀದಿ ಪತ್ರ ಆಗಿದೆ. ಸದರಿ ಖರೀದಿ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ನನ್ನ ತಂದೆ ದಾವಾ ಸ್ವತ್ತುಗಳನ್ನು 27,000/- ಗಳಿಗೆ ಖರೀದಿ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ದಾವಾ ಸ್ವತ್ತುಗಳಿಗೂ ಮತ್ತು

ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪಹಣಿಗಳಲ್ಲಿ ಶಾಮಮ್ಮನ ಹೆಸರಿನಲ್ಲಿ ಇವೆ ಎಂದರೆ ಸರಿ. ಸಾಕ್ಷಿ ಮುಂದವರೆದು ಲಾಕ್ ಡೌನ್ ಸಮಯದಲ್ಲಿ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ಎ.ಸಿ. ಕಚೇರಿಯಲ್ಲಿ ವಿಚಾರಣೆ ನಡೆದಾಗ ನಾನು ಹಾಜರು ಆಗಿರಲಿಲ್ಲ. ಡಿ.ಸಿ. ಕಚೇರಿಯಲ್ಲಿ ರೀವಿಜನ್ ಅರ್ಜಿಯನ್ನು ನಿಪಿ-66 ರ ಪ್ರಕಾರ ವಾಪಸ್ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಎಲ್ಲಾ ಆಸ್ತಿಗಳು ವಾದಿಯರಿಗೆ ಸೇರಿವೆ ಎಂದರೆ ಸರಿಯಲ್ಲ. ಅಸಲು ದಾವಾ ನಂ 3/1985 ರಲ್ಲಿ ಮರಣ ಶಾಸನ ಪತ್ರವನ್ನು ರದ್ದು ಪಡಿಸಲು ಬರುವುದಿಲ್ಲ ಎಂದು ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರಿಗೆ ವಯಸ್ಸು ಆಗಿರುವ ಸಂಗತಿಯನ್ನು ದೂರ್ಬಳಕೆ ಮಾಡಿಕೊಂಡು ದಾವಾ ಸ್ವತ್ತುಗಳ ವಾದಿಯರ ಸ್ವಾ ದೀನಕ್ಕೆ ತೊಂದರೆ ಕೋಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ವಾದಿಯರು ಮಾಲೀಕರು ಮತ್ತು ಖಬ್ಜಾದಾರರು ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೋಡುವುದರ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**